ಪ್ರಯಾಣ ಮಾಡಿದಾಕ್ಷಣ ಪರಸ್ಪರ ಹುಟ್ಟು ಪೂರ್ವೋತ್ತರಗಳನ್ನೆಲ್ಲಾ ಕೇಳಿ ತಿಳಿದುಕೊಳ್ಳಬೇಕೇ? ವಿಶಾಲವಾದ ಈ ಪ್ರಪಂಚದಲ್ಲಿ ಎಷ್ಟೋ ಜನರನ್ನು ನಾವು ಭೇಟಿ ಮಾಡುತ್ತಿರುತ್ತೇವೆ. ಅವರೆಲ್ಲರ ಪರಿಚಯ ಮಾಡಿಕೊಳ್ಳುವ ಅವಶ್ಯಕತೆ ಇದೆಯೆ?

"ನೀವು ಕಾಜೀಪೇಟೆಯಲ್ಲಿ ಹತ್ತಿದಿರಿ ಅಲ್ಲವೇ?" ಮತ್ತೆ ಅವರೇ ಕೇಳಿದರು.

"ಹೌದು. ಒಂದು ಚಿಕ್ಕ ಕೆಲಸದ ಮೇಲೆ ನಿನ್ನೆ ಬಂದಿದ್ದೆ. ಕೆಲಸವಾಯ್ತು. ವಾಪಸ್ಸು ಹೋಗ್ತಿದೀನಿ." ನನ್ನ ಕೈ ಚೀಲದಿಂದ ತಿಂಡಿಡಬ್ಬಿ ತೆಗೆಯುತ್ತಾ ಹೇಳಿದೆ.

"ಓ... ನೀವಿನ್ನೂ ತಿಂಡಿ ತಿಂದಿಲ್ಲವೆ? ನಾನು ಸಿಕಂದರಾಬಾದ್‌ನಲ್ಲಿ ರೈಲು ಹತ್ತುತ್ತಿದ್ದಂತೆಯೇ ಮುಗಿಸಿಬಿಟ್ಟೆ. ಸಮಯಕ್ಕೆ ಔಷಧಿ ತಗೋಬೇಕು ನೋಡಿ.." ನಾನು ಕೇಳದೆಯೇ ಆತ ಹೇಳಿದರು.

ನಾನು ತಿನ್ನುವುದನ್ನು ಮುಗಿಸಿ ಮಲಗಲು ಸಿದ್ಧನಾದೆ. ಬೇಗ ಮಲಗುವುದು ನನ್ನ ಅಭ್ಯಾಸ. ಅವರೂ ಬೆಡ್‌ಶೀಟು ಹಾಸಿಕೊಂಡು ಮಲಗಿದರು. ಬೆಳಗ್ಗೆಯಿಂದ ಕೆಲಸದ ಮೇಲೆ ಅಲ್ಲಿ ಇಲ್ಲಿ ಒಂದೇ ಸಮನೆ ಸುತ್ತಾಡಿ ದಣಿದಿದ್ದ ನನಗೆ ಮಲಗಿದ ಕೂಡಲೇ ನಿದ್ದೆ ಹತ್ತಿತು. ಯಾವುದೋ ಸ್ಟೇಷನ್ನಿನಲ್ಲಿ ರೈಲು ನಿಂತಾಗ ಎಚ್ಚರವಾಯಿತು.



"ಇದು ಯಾವ ಸ್ಟೇಷನ್?" ಕೇಳಿದೆ ಎದುರಿಗಿದ್ದವರನ್ನು.

"ವಿಜಯವಾಡ" ಎಚ್ಚರವಾಗಿಯೇ ಇದ್ದ ಅವರು ಹೇಳಿದರು.

ನಾನು ಕೈ ಗಡಿಯಾರ ನೋಡಿಕೊಂಡೆ. ಇಷ್ಟುಹೊತ್ತಿಗೆ ರಾಜಮಂಡ್ರಿ ಸೇರಿರಬೇಕಿತ್ತು. ಆದರೆ, ಇನ್ನೂ ವಿಜಯವಾಡದಲ್ಲಿಯೇ ಇದೆ. ಅಂದರೆ ರೈಲು ನಿಧಾನವಾಗಿ ಹೋಗ್ತಿದೆಯಾ? ನನಗೆ ನಾನೇ ಕೇಳಿಕೊಂಡೆ.

"ಹೌದು. ರೈಲು ಮಧ್ಯದಲ್ಲಿ ಬಹಳಹೊತ್ತು ನಿಂತುಬಿಟ್ಟಿತ್ತು. ನನಗೆ ನಿದ್ದೆ ಬರಲಿಲ್ಲ. ಎಚ್ಚರವಾಗಿಯೇ ಇದ್ದೆ."

"ನಾನು ಕಾಫಿ ಕುಡಿದು ಬರ್ತೀನಿ, ನಿಮಗೂ ಬೇಕಾ?" ರೈಲು ಇಳಿಯುತ್ತಾ ಅವರನ್ನು ಕೇಳಿದೆ.

ಬೇಕು ಎಂಬಂತೆ ತಲೆಯಾಡಿಸಿ ಪರ್ಸಿನಿಂದ ಹತ್ತು ರೂಪಾಯಿ ನೋಟನ್ನು ತೆಗೆದುಕೊಟ್ಟರು. ಆಗ ಅವರ ಪರ್ಸನ್ನು ಗಮನಿಸಿದೆ. ಅದರ ಹೊಟ್ಟೆ ತೆಳ್ಳಗಿತ್ತು.

"ಓ... ಇವರೂ ಕೂಡ ನಮ್ಮ ಹಾಗೆ ಮಧ್ಯಮವರ್ಗದ ಜನ ಎಂದಹಾಗಾಯಿತು..." ಅಂದುಕೊಂಡು ಹೋದವನು ಬರುತ್ತಾ ಅವರಿಗೂ ಕಾಫಿ ತೆಗೆದುಕೊಂಡು ಬಂದೆ.

"ವಿಜಯವಾಡದಲ್ಲಿ ಕಾಫಿ ಚೆನ್ನಾಗಿರುತ್ತೆ..." ಬಾಯಿ ಚಪ್ಪರಿಸುತ್ತಾ ಹೇಳಿದೆ.

ನನ್ನ ಮಾತಿಗೆ ಅವರು ಉತ್ತರಿಸದೆ ಕಾಫಿ ಹೀರುತ್ತಿದ್ದರು. ಮತ್ತೆ ರೈಲು ಹೊರಟಿತು.

ನಾನು ಮತ್ತೆ ನಿದ್ದೆಗೆ ಜಾರಿದೆ.

ರೈಲು ಯಾವುದೋ ಸ್ಟೇಷನ್ನಿನಲ್ಲಿ ನಿಂತಾಗ ನನಗೆ ಎಚ್ಚರವಾಯಿತು.

ಚೆನ್ನಾಗಿಯೇ ಬೆಳಕು ಹರಿದಿತ್ತು.

"ಸಾಮರ್ಲಕೋಟ ಜಂಕ್ಷನ್..." ನಾನು ಕೇಳದೆಯೇ ಹೇಳಿದರಾತ. ಅವರು ಆಗಲೇ ಎದ್ದು ಕುಳಿತು ಯಾರೊಡನೆಯೋ ಫೋನಿನಲ್ಲಿ ಮಾತನಾಡುತ್ತಿದ್ದರು. ಬಹುಶಃ ಹೈದರಾಬಾದಿನ ಮಿತ್ರರೊಡನೆ ಇರಬೇಕು.

ನಾನು ಎದ್ದುಹೋಗಿ ಮುಖ ತೊಳೆದುಕೊಂಡು ಬಂದೆ. ಜೋರಾಗಿ ಹಸಿವಾಗುತ್ತಿತ್ತು.